ಚಿಂತನೆ ಮಾಡುವುದು ಇದೀ ಸಮಾಜಕ್ಕೆ ಸೇರಿದೆ. ಆದ್ದರಿಂದ, ಈ ಆಯವ್ಯಯದಲ್ಲಿ ಈ ಚಿಂತನೆ ಮಾಡಿರುವುದು, ಇದಕ್ಕೆ ವಿಶೇಷವಾದ ಕಾರ್ಯಕ್ರಮವನ್ನು ರೂಪಿಸಿರುವುದು, ಒಂದು ಹೊಸ ಕಸರತ್ತು, ಒಂದು ಹೊಸ ಮಜಲು. ಈ ದೃಷ್ಟಿಯಿಂದ ಇವತ್ತು, ಇದನ್ನು ಸ್ವಾಗತ ಮಾಡತಕ್ಕ ಕೆಲಸ.....

ಉಪಾಧ್ಯಕ್ಷರು : ತಾವಿನ್ನೂ ಎಷ್ಟು ಹೇಳಿ ತೆಗೆದುಕೊಳ್ಳುತ್ತೀರಿ?

ಶ್ರೀ ಕಾಗೋಡು ತಿಮ್ಮಪ್ಪ : ತಾವು ಎಷ್ಟು ಸಮಯ ಹೇಳಿದರೆ, ಅಷ್ಟು ಅಥವಾ ಇನ್ನು ಅರ್ಧ ಗಂಟೆ ಮಾತನಾಡುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : 6 ಗಂಟೆಗೆ ಕಾಮನ್ವೆಲ್ತ್ ಪಾರ್ಲಿಮೆಂಟರಿ ಸಭೆ ಇದೆ. ಈಗ ಎರಡು ಬಿಲ್ಲುಗಳನ್ನು ತೆಗೆದುಕೊಳ್ಳಬಹುದು. ಅವರು ನಾಳೆ ಚರ್ಚೆಯನ್ನು ಮುಂದುವರಿಸಬಹುದು.

ಉಪಾಧ್ಯಕ್ಷರು : ಈಗ ಬಿಲ್ಲುಗಳನ್ನು ತೆಗೆದುಕೊಳ್ಳೋಣ. ತಾವು ನಾಳೆ ಮುಂದುವರಿಸಿ.

ಶ್ರೀ ಕಾಗೋಡು ತಿಮ್ಮಪ್ಪ : ಆಗಬಹುದು.

ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕ 1994 ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, 1994 ರ ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಈ ವಿಧೇಯಕದ ಕಾಪಿಯನ್ನು ಸಹ ನಮಗೆ ಕೊಟ್ಟಿಲ್ಲ. ಇದು ಪ್ರಮುಖವಾದ ಬಿಲ್ ಇದೆ. ಇದರ ಬಗ್ಗೆ ಚರ್ಚೆಯಾಗಬೇಕಾಗಿದೆ. ಇದನ್ನು ಪಾಸ್ ಮಾಡಿಕೊಳ್ಳುವುದಕ್ಕೆ ನಮ್ಮಲ್ಲೇನೂ ಅಭ್ಯಂತರ ಇಲ್ಲ. ಜೊತೆಗೆ ತಮಗೆ ಬಹುಮತ ಇದೆ. ದಯಮಾಡಿ ಇದನ್ನು ನಾಳೆ ತೆಗೆದುಕೊಳ್ಳಬಹುದು.

ಉಪಾಧ್ಯಕ್ಷರು : ಆಯಿತು. ನಾಳೆ ತೆಗೆದುಕೊಳ್ಳೋಣ. ಈಗ ಒಂದು ಸಂದೇಶವಿದೆ. ಅದು ಕಾಮನ್ವೆಲ್ತ್ ದಿನಾಚರಣೆಯ ಸಂದೇಶ.

ಸಂದೇಶ

'ಕಾಮನ್ ವೆಲ್ತ್ ದಿನಾಚರಣೆ ಸಂದೇಶ 1994"

ಕಾಮನ್ವೆಲ್ತ್ ಮುಖ್ಯಸ್ಥೆಯಾದ ಘನತೆವೆತ್ತ ಮಹಾರಾಣಿಯವರಿಂದ ಕಾಮನ್ವೆಲ್ತ್ ದಿನಾಚರಣೆಯ ಸಂಬಂಧದಲ್ಲಿ ನನಗೆ ಬಂದಿರುವ 14ನೇ ಮಾರ್ಚ್ 1994ರ ದಿನಾಂಕದ ಸಂದೇಶವು ಈ ಕೆಳಗಿನಂತಿದೆ.

ಈ ವರ್ಷದ ಅತಿ ಜನಪ್ರಿಯವಾದ ಕಾಮನ್ವೆಲ್ತ್ ಕಾರ್ಯಕ್ರಮವೆಂದರೆ ಕೆನಡಾದ ವಿಕ್ಟೋರಿಯಾದಲ್ಲಿ ನಡೆಯುವ ಕಾಮನವೆಲ್ತ್ ಕ್ರೀಡೆಗಳು ಹಾಗೂ ತತ್ಸಬಂಧಿ ಉತ್ಸವ, ಅಭಿವೃದ್ಧಿಯ ನಾನಾ ಪಂತಗಳಲ್ಲಿರುವ ಚಿಕ್ಕ ಹಾಗೂ ಬೃಹತ್ ರಾಷ್ಟ್ರಗಳ ಪ್ರತಿನಿಧಿಗಳ ಮೂಲಕವಾಗಿ ವಿಶ್ವದಾದ್ಯಂತವೂ ಲಕ್ಷೋಪಲಕ್ಷ ಮಂದಿ ಸಾಪತ್ಸಾಧನೆಯ ಈ ಮಹೋತ್ಸವದ ಈ ಆಚರಣೆಯನ್ನು ವೀಕ್ಷಿಸುತ್ತಾರೆ. ಅಬಾಲವೃದ್ಧರಾಗಿ ಬಹುತೇಕ ನಾವೆಲ್ಲರೂ ಪ್ರೇಕ್ಷಕರಾಗಿಯೋ, ಪಾತ್ರಧಾರಿಗಳಾಗಿಯೋ ಕ್ರೀಡೆಯಲ್ಲಿ ಆಸಕ್ತರಾಗಿದ್ದೇವೆ. ಅಥವಾ ಪಾಲ್ಗೊಂಡಿದ್ದೇವೆ. ಇದರಿಂದಾಗಿ ಕ್ರೀಡೆಯನ್ನು ಈ ಸಾಲಿನ ಕಾಮನ್ವೆಲ್ತ್ ದಿನಾಚರಣೆಯ ವಸ್ತು ವಿಷಯವಾಗಿ ಆಯ್ದುಕೊಂಡಿರುವುದು ಉಚಿತವಾಗಿದೆ.

ವ್ಯಕ್ತಿಗತವಾಗಿ ಹಾಗೂ ರಾಷ್ಟ್ರಗಳಾಗಿ ತಮ್ಮ ಉತ್ಕರ್ಷದಲ್ಲಿ ಕ್ರೀಡೆಯು ನಿರ್ವಹಿಸುವ ಪಾತ್ರ ಎಷ್ಟು ಪ್ರಮುಖವಾದುದೆಂಬುದನ್ನು ಕಾಮನ್ವೆಲ್ತ್ ರಾಷ್ಟ್ರಗಳ ಮುಖ್ಯಸ್ಥರುಗಳು ಕಳೆದ ವರ್ಷ ಸೈಪ್ರಸ್ನಲ್ಲಿ ಸಭೆ ಸೇರಿದ ಸಂದರ್ಭದಲ್ಲಿ ಕಂಡುಕೊಂಡರು. ನಾವು ಒಂದು ಚಿಕ್ಕ ಅಥವಾ ಹೆಚ್ಚು ಪ್ರಸಿದ್ಧವಲ್ಲದ ದೇಶದ ನಾಗರೀಕರಾಗಿದ್ದ ಪಕ್ಷದಲ್ಲೂ, ನಮ್ಮ ರಾಷ್ಟ್ರವು ಕ್ರೀಡೆಯೊಂದರಲ್ಲಿ ಮಿಂಚಿದರೆ ವಿಶ್ವವೇದಿಕೆಯಲ್ಲಿ ನಾವು ಸ್ಥಾನ ಪಡೆಯುತ್ತೇವೆ. ಪ್ರಗತಿ ಸಾಧಿಸಲು ಹೆಣಗಿದೆವಾದಲ್ಲಿ, ದೈಹಿಕ ಹಾಗೂ ಮಾನಸಿಕ ಶಿಕ್ಷಣಗಳೇ ಸಾಧನೆಯಲ್ಲಿ ಇನ್ನೂ ಹೆಚ್ಚು ಕಠಿಣವಾದ ಗುರಿಗಳತ್ತ ನಾವು ದೃಷ್ಟಿಪರಿಸಿದಲ್ಲಿ, ಪ್ರಯೋಜನ ನಮ್ಮದೇ. ಒಂದು ತಂಡದ ಸದಸ್ಯರಾಗಿ ನಾವು ಕ್ರೀಡೆಯಲ್ಲಿ ಭಾಗವಹಿಸಿದಲ್ಲಿ, ಪರಸ್ಪರ ಬಲಾಬಲಗಳನ್ನು ಕಂಡುಕೊಳ್ಳುತ್ತೇವೆ ಅಲ್ಲದೆ ಪರಸ್ಪರರ ದೌರ್ಬಲ್ಯಗಳನ್ನು ಕಡಿಮೆ ಮಾಡಿಕೊಳ್ಳುವುದೂ ನಮಗೆ ಸಾಧ್ಯವಾಗುತ್ತದೆ. ಸೋಲು ಮತ್ತು ಗೆಲುವು ಎಂದರೆ ಏನು ಹಾಗೂ ಅದೃಷ್ಟದ ಆಟ ಎಷ್ಟು ಎಂಬುದನ್ನು ನಾವು ಕಂಡುಕೊಳ್ಳುತ್ತೇವೆ. ಸಕಲ ಸೌಕರ್ಯಗಳುಳ್ಳ ಅಥವಾ ಯಾವ ಸೌಲಭ್ಯವೂ ಇಲ್ಲದ ಹಿನ್ನೆಲೆಯಿಂದ ನಾವು ಬಂದಿದ್ದ ಪಕ್ಷದಲ್ಲೂ ನಮ್ಮಲ್ಲಿನ ಯಾರೊಬ್ಬರೂ ದೈವದತ್ತವಾದ ಪ್ರತಿಭೆಯನ್ನು ಪಡೆದು ಹುಟ್ಟಿರಲು ಸಾಧ್ಯವಿದೆ. ಉನ್ನತ ಮಟ್ಟದ ಕೌಶಲ್ಯವನ್ನು ರೂಢಿಸಿಕೊಳ್ಳುವವರನ್ನು ನಾನು ಕೊಂಡಾಡುತ್ತೇವೆ. ಇಚ್ಛಾಶಕ್ತಿ ಹಾಗೂ ಸಮರ್ಪಣಾ ಮನೋಭಾವಕ್ಕೆ ಅವರು ಆದರ್ಶ ಮಾದರಿಯೊಂದನ್ನು ನಮಗೆಲ್ಲಾ ರೂಪಿಸಿಕೊಡುತ್ತಾರೆ. ಸ್ಪರ್ಧೆಯು ಕಡುಕಷ್ಟಕರವಾದುದಲ್ಲದೆ, ಇದು ಎಲ್ಲರಿಗೂ ಸಾಧ್ಯವಾಗುವಂಥದಲ್ಲ. ಯಾವುದೇ ಕ್ರೀಡೆಗೆ ಮೂಲಭೂತ ಸೌಲಭ್ಯ, ಸಮಾಯಾವಕಾಶ ಮುಂತಾದ ಅನುಕೂಲಗಳು ಎಲ್ಲರಲ್ಲೂ ಇರುವುದಿಲ್ಲ. ಕ್ರೀಡೆಯು ಶ್ರೇಷ್ಠಾತಿ ಶ್ರೇಷ್ಠವಾದುದು ಮಾತ್ರವಲ್ಲ ವಿವಿಧ ರಾಷ್ಟ್ರಗಳ ಹಾಗೂ ಭಾಷೆಗಳ ಜನ ಸಮುದಾಯವು ಪರಸ್ಪರ ಹೃದಯ ಸಂವಾದದಲ್ಲಿ ತೊಡಕುಗಳು ಬಹುಶಃ ಅತ್ಯುತ್ತಮವಾದ ವಿಧಾನವೂ ಹೌದು. ಕ್ರೀಡೆಯು ಸಂಬಂಧ ಸೇತುವೆಯನ್ನು ನಿರ್ಮಿಸಬಲ್ಲದಲ್ಲದೆ ಅಡ್ಡಿ ಆತಂಕಗಳ ಅಡ್ಡಗೋಡೆಗಳನ್ನು ನಿರ್ನಾಮ ಮಾಡುತ್ತದೆ. ಸರ್ವೇಸಾಮಾನ್ಯವಾಗಿ ಚರ್ಚಿಸಲು ಸಾಧ್ಯವಾಗುವ ಸರಕನ್ನೂ ಒಳಗೊಂಡ ಇದು ಚೇತೋಹಾರಿಯೂ ಮನೋರಂಜಕ ಸಹಚರಿಯೂ ಆಗಿದೆ.

ಜೀವನವೆಂಬ ಓಟದ ಸ್ಪರ್ಧೆಯಲ್ಲಿ ನಾವೆಲ್ಲರೂ ಭಾಗಿಗಳಾಗಲೇ ಬೇಕು. ಕೆಲವೊಮ್ಮೆ ಕಲ್ಲುಮುಳ್ಳುಗಳ ದುರ್ಗಮವಾದ ಹಾದಿಯನ್ನು ಕ್ರಮಮಿಸಬೇಕಾಗುತ್ತದೆ. ಸ್ವಪ್ರಯತ್ನದಿಂದ ಸಾಗಿದೆವಾದರೆ ಮಾರ್ಗಕ್ರಮಣ ಮಾಡುವುದು ಅಸಾಧ್ಯ ಎಂಬಷ್ಟರ ಮಟ್ಟಿಗೆ ಅಡಚಣೆಗಳು ಒದಗಿ ಬರುತ್ತವೆ. ಆದರೆ, ಹಾದಿಗುಂಟ, ನಾವೆಲ್ಲ ಪರಸ್ಪರ ಸಹಾಯ ಸೌಹಾರ್ದಗಳ ವಿನಿಮಯದಲ್ಲಿ ತೊಡಗಿ ಸಾಗಿದೆವಾದರೆ ಸ್ಪರ್ಧೆಯು ಸುಗಮವೂ ಸಹನೀಯವೂ ಆಗುವಂತೆ ಮಾಡಲು ನಮಗೆ ಸಾಧ್ಯವಿದೆ. ಐವತ್ತು ಮಂದಿಯ ಕಾಮನ್ವೆಲ್ತ್ ಸದಸ್ಯರಾದ ನಮ್ಮಲ್ಲಿ ಸಹಕಾಯಕ್ತವೂ ಸ್ನೇಹಶೀಲವೂ ಆದ ಸ್ಪರ್ಧೆ ಸಾಧ್ಯವಿದೆ. ಪ್ರತಿಯೊಬ್ಬರ ಜೀವನವನ್ನೂ ಉತ್ತಮಗೊಳಿಸುವ ಸಲುವಾಗಿ ನಮ್ಮ ಸಂಪನ್ಮೂಲಗಳನ್ನು ಮತ್ತು ಶಕ್ತಿಮೂಲಗಳನ್ನು ನಾವು ಒಗ್ಗೂಡಿಸಬಹುದಾಗಿದೆ. ನಿಜಕ್ಕೂ ನಾವು ಗೆಲ್ಲಬೇಕಾದ ಬಹುಮಾನವೆಂದರೆ ಇದು.

ಈಗ ಸದನವನ್ನು ಮುಂದೂಡಿ, ನಾಳೆ ಬೆಳಿಗ್ಗೆ 11-00 ಗಂಟೆಗೆ ಮತ್ತೆ ಸಮಾವೇಶವಾಗುವುದು.

(ಸದನವು ಸಂಜೆ 5-52ಕ್ಕೆ ಮುಕ್ತಾಯವಾಗಿ ಮತ್ತೆ ದಿನಾಂಕ 29-3-94ರಂದು ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು)

+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).

L.A. Vol. : IV
No. of Copies 680

KARNATAKA LEGISLATURE SECRETARIAT

Published under Rule 336 of the Rules of Procedure and Conduct of Business in the Legislative Assembly

AND

Printed by the Director, Printing, Stationery and Publications at the Government Press, Bangalore-560 001